Sc P

# B2KAN4T1 – E – 25 – 2046

SECOND SEMESTER B.COM./B.B.A./B.COM.(CS) (REVISED NEP) DEGREE EXAMINATION, JULY 2025

## AECC : KANNADA

**ಕನ್ನಡ ಭಾಷಾ ಪಠ್ಯ : ಅರಿವು – ೨**

ಸಮಯ : 3 ಗಂಟೆಗಳು] [ಗರಿಷ್ಠಾಂಕಗಳು : 80

***ಸೂಚನೆ :*** *ಭಾಷೆ ಮತ್ತು ಬರಹದ ಶುದ್ಧಿಗೆ ಗಮನ ಕೊಡಲಾಗುವುದು.*

**ಭಾಗ – ಅ**

I. ಬೇಕಾದ ಹತ್ತಕ್ಕೆ ಉತ್ತರಿಸಿರಿ. **(10×2=20)**

1) ಮಾಯದಂತ ಮಳೆ ಯಾವ ಕೆರೆಗೆ ಬಂತು ? ಇದರ ಸುದ್ದಿಯನ್ನು ಕೊಡುವವರ್‍ಯಾರು ?

2) "ಹುಳಿ ಮಾವಿನ ಮರ" ಇದು ಯಾರ ಆತ್ಮಕಥನ ? ಇವರು ಯಾವ ಪತ್ರಿಕೆಯನ್ನು ಪ್ರಕಟಿಸುತ್ತಿದ್ದರು ?

3) ಅಂಬಲಿ ಮೀಮಾಂಸೆಯನ್ನು ಮಂಡಿಸಿದವರ್‍ಯಾರು ? ಇವರು ಎಷ್ಟನೆಯ ಶತಮಾನದಲ್ಲಿ ಬದುಕಿದ್ದರು ?

4) ಕುದ್ಮಲ್ ರಂಗರಾವ್‌ರವರ ಮಾತೃಭಾಷೆ ಯಾವುದು ? ಮತ್ತು ಯಾರ ಚಿಂತನೆಯಿಂದ ಪ್ರಭಾವಿತರಾಗಿದ್ದರು ?

5) 'ಬಚ್ಚೀಸು' ಕಥೆಯ ಲೇಖಕಿ ಯಾರು ? ಹಾಗೂ ಅವರ ಯಾವುದಾದರೂ ಎರಡು ಕೃತಿಗಳನ್ನು ಹೆಸರಿಸಿರಿ.

6) ಡಾ. ಸಬಿಹಾ ಭೂಮಿಗೌಡ ಎಲ್ಲಿ ಜನಿಸಿದರು ? ಇವರು ಯಾವ ವಿಶ್ವ ವಿದ್ಯಾಲಯದ ಕುಲಪತಿಗಳಾಗಿದ್ದರು ?

7) ಗೊಗ್ಗವ್ವೆಳ ಕಾಯಕ ಯಾವುದು ? ಮತ್ತು ಅವಳ ಅಂಕಿತನಾಮವೇನು ?

8) ಡಾ. ಅನಸೂಯ ಕಾಂಬಳೆಯವರು ಯಾವ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದರು ? ಹಾಗೂ ಸಂಶೋಧನ ಕೃತಿಯ ಹೆಸರೇನು ?

9) 'ರಂಗೋಲಿ' ಕವಿತೆಯನ್ನು ಯಾವ ಕವನಸಂಕಲನದಿಂದ ಆಯ್ದುಕೊಳ್ಳಲಾಗಿದೆ ? ಅದರ ಕವಿ ಯಾರು ?

10) 'ಸರ್ವರಿಗೂ ಸಮಬಾಳು, ಸಮಪಾಲು' ಎನ್ನುವ ಆಶಯವನ್ನು ಹೊಂದಿರುವ ಕವಿತೆ ಯಾವುದು ? ಆ ಕವಿಯ ಹೆಸರೇನು ?

11) ಪ್ಲೇಟೋ ತತ್ವಜ್ಞಾನಿ ಸಮಾಜದ ಜನರನ್ನು ಎಷ್ಟು ವರ್ಗಗಳನ್ನಾಗಿ ವಿಂಗಡಿಸಿದರು ? ಹಾಗೂ ಅವು ಯಾವುವು ?

12) ಡಾ. ಬೆಸಗರಹಳ್ಳಿ ರಾಮಣ್ಣನವರ ವೃತ್ತಿ ಯಾವುದು ? ಅವರ ಅಭಿನಂದನಾ ಗ್ರಂಥವನ್ನು ಹೆಸರಿಸಿರಿ.

**[ಪು.ತಿ.ನೋ.**

## ಭಾಗ – ಬ

II. ಬೇಕಾದ ಆರಕ್ಕೆ ಉತ್ತರಿಸಿರಿ. (6×5=30)

13) ಭೂ ಸ್ವಾಧೀನ ಕಾಯ್ದೆ.

14) ಜಗದೀಶ ಮತ್ತು ಶಾಂತಾ.

15) ನಾನೊಂದು ಮರವಾಗಿದ್ದರೆ.

16) ಚನ್ನಮಲ್ಲ-ಕುಮಾರಸ್ವಾಮಿ.

17) ಲಿಂಗ-ಲಿಂಗತ್ವ.

18) ಅಕ್ಕಮಹಾದೇವಿ.

19) ಪ್ರಣಾಳಿಕೆ.

20) ಸಮಾಜವಾದ.

## ಭಾಗ – ಕ

III. ಬೇಕಾದ **ಮೂರಕ್ಕೆ** ಉತ್ತರಿಸಿರಿ. (3×10=30)

21) 'ರೈತನೊಬ್ಬನ ಕ್ರಾಂತಿ : ಹುಲ್ಲು ಕಡ್ಡಿಯ ಪವಾಡ' ಲೇಖನದ ನೈಸರ್ಗಿಕ ಕೃಷಿ ಪದ್ಧತಿಯನ್ನು ವಿವರಿಸಿರಿ.

22) ಪೌರಕಾರ್ಮಿಕರಿಗೆ ಅಧಿಕಾರಿ ವರ್ಗ ಮತ್ತು ಕಾಂಟ್ರ್ಯಾಕ್ಟರ್ ವರ್ಗದ ಶೋಷಣೆಯ ಚಿತ್ರಣ 'ಬಚ್ಚೀಸು' ಕಥೆಯಲ್ಲಿ ಹೇಗೆ ಚಿತ್ರಿಸಿದೆ ? ಚರ್ಚಿಸಿರಿ.

23) ದಲಿತ ಮಹಿಳೆಯರ ಪ್ರಶ್ನೆಗಳು ಮತ್ತು ಸಾಂಸ್ಕೃತಿಕ ಆಯಾಮಗಳ ಕುರಿತು ಡಾ. ಅನಸೂಯ ಕಾಂಬಳೆಯವರ ವಿಚಾರಗಳನ್ನು ವಿವರಿಸಿರಿ.

24) ಸರ್ಕಾರಿ ಆಸ್ಪತ್ರೆಗಳಲ್ಲಿ ಬಡವರ ನೋವು, ಗೋಳಾಟದ ವಾಸ್ತವದ ಸಂಗತಿಯನ್ನು 'ಗಾಂಧಿ' ಕಥೆ ಹೇಗೆ ನಿರೂಪಿಸಿದೆ ? ನಿರೂಪಿಸಿರಿ.

---